**ಓಎಸ್ ನಂಃ 33/2022      ಡಿ.ಡಬ್ಲ್ಯೂ - 1**

**ದಿನಾಂಕಃ 09.09.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.**

ಮುಂದುವರೆದ ಪಾಟೀಸವಾಲುಃ ವಾದಿಯ ಪರ ಶ್ರೀ ಎಸ್.ಎನ್.ಎಸ್. ವಕೀಲರಿಂದಃ

ಪ್ರಸ್ತುತ ದಾವೆಯನ್ನು ಯಾವ ಪರಿಹಾಕ್ಕಾಗಿ ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ನನ್ನ ಅನುಭವದಲ್ಲಿರುವ ಆಸ್ತಿಯನ್ನು ಅವರದ್ದು ಎಂದು ಹಾಕಿರುತ್ತಾರೆ ಎನ್ನುತ್ತಾರೆ. ನಿಮ್ಮ ವಕೀಲರಿಗೆ ನೀವು ಎಲ್ಲಾ ವಿಚಾರ ತಿಳಿಸಿ ಪ್ರತಿವಾದ ಪತ್ರವನ್ನು ಹಾಕಿರುತ್ತೀರಿ ಎಂದರೆ ಹೌದು ಎನ್ನುತ್ತಾರೆ. ನಿಮಗೆ ಓದಲು ಬರುತ್ತದೆಯಾ ಎಂದರೆ ಬರುತ್ತದೆ ಎನ್ನುತ್ತಾರೆ. ನಿಪಿ 2 ವಾದಿಗೆ ಮಂಜೂರಾದ ಪತ್ರ ಎಂದರೆ ಸುಳ್ಳು ಎನ್ನುತ್ತಾರೆ. 1971 ರಿಂದ ವಾದಿ ದಾವಾ ಆಸ್ತಿಯಲ್ಲಿ ಸ್ವಾಧಿನದಲ್ಲಿ ಇರುತ್ತಾರೆ ಎಂದರೆ ಇಲ್ಲ ಎನ್ನುತ್ತಾರೆ. ವಾದಿಯ ಸ್ವಾಧಿನಕ್ಕೆ ಅಡ್ಡಿಪಡಿಸಿದ ಕಾರಣ ನಿಮ್ಮ ವಿರುದ್ಧ ದಾವೆ ಹೂಡಿರುತ್ತಾರೆ ಎಂದರೆ ನಾನು ಅವರಿಗೆ ತೊಂದರೆ ಮಾಡಿಲ್ಲ ಎನ್ನುತ್ತಾರೆ. ನಿಮ್ಮ ಆಸ್ತಿ ಸ.ನಂ. ಎಷ್ಟು ಎಂದರೆ ಸ.ನಂ 27 ಎನ್ನುತ್ತಾರೆ. ಸ.ನಂ. 27 ದಾವಾ ಆಸ್ತಿ ಈ ಜಮೀನಿನಲ್ಲಿ ಇಲ್ಲ ಎಂದರೆ ಎರಡೂ ಅಕ್ಕಪಕ್ಕ ಇರುತ್ತದೆ ಎನುತ್ತಾರೆ. ಸ.ನಂ. 9 ದಾವಾ ಆಸ್ತಿಯ ಯಾವ ಕಡೆ ನಿಮ್ಮ ಆಸ್ತಿ ಬರುತ್ತದೆ ಎಂದರೆ 9 ಸ.ನಂ. ರಲ್ಲಿ 2 ಎಕರೆಯಲ್ಲಿ ನಾನು ಸ್ವಾಧಿನದಲ್ಲಿ ಇರುತ್ತದೆ ಎನ್ನುತ್ತಾರೆ. ದಾವಾ ಆಸ್ತಿ ಸ.ನಂ. 9 ದಕ್ಷಿಣಕ್ಕೆ ರಸ್ತೆ ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ಸ್ವಂತ ಜಮೀನಿನಲ್ಲಿ ರಸ್ತೆ ಮಾಡಿಕೊಂಡಿರುತ್ತೆನೆ ಎನ್ನುತ್ತಾರೆ. ನೀವು ವಾದಿಯ ವಿರುದ್ಧ ಗಲಾಟೆ ಮಾಡಿದ ಕಾರಣ ದಾವೆ ಸಲ್ಲಿಸಿರುತ್ತಾರೆ ಎಂದರೆ ನಾನು ಗಲಾಟೆ ಮಾಡಿಲ್ಲ ಎನ್ನುತ್ತಾರೆ.

ಮರು ವಿಚಾರಣೆಃ ಇಲ್ಲ.

**(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಸಾ ಓ ಹೇ ಕೇ ಸ ಅದೆ.**

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.